ಕಥೆ



**ಮೊಗಳ್ಳಿ ಗಣೇಶ್**

ಕಲೆ: ವಿಶ್ವನಾಥ್ ಎ.ಎಸ್.

# ಹೊಸಿಲು ದಾಟಿದವರು

ಅದು ಬಸವಣ್ಣನವರ ಕಾಲದ ಮನೆ. ಅದೆಷ್ಟು ಜನ ಆ ವಿಶಾಲ ಮನೆಯ ಪಡಸಾಲೆ ಅಂಗಳಗಳಲ್ಲಿ ಕೂತು ಸಾಧು ಶರಣ, ಸಂತ ಯತಿಗಳ ಹಾಡು ಪಾಡು ನಡೆ ನುಡಿಯ ಆಲಿಸಿ ಹೋಗಿದ್ದಾರೋ, ಲೆಕ್ಕವಿಲ್ಲ. ಆ ಮನೆಯ ಹೆಬ್ಬಾಗಿಲು ಒಂದು ಕಾಲಕ್ಕೆ ಸದಾ ತೆರೆದೇ ಇತ್ತು. ಇವತ್ತಿನ ಗತಿಯೇ ಬೇರೆ. ಹೊಸ ಕಾಲದ ತಳುಕುಬಳುಕಿಗೆ ಹೊಂದಿಕೊಳ್ಳಲು ಆ ಮನೆಯು ಥರಾವರಿ ಗಿಲೀಟುಗಳ ಅಂಟಿಸಿಕೊಂಡಿತ್ತು. ಆ ಮುಂಬಾಗಿಲೋ ಎಷ್ಟು ಕಾಲ ತಾನೇ ತಡೆದೀತು. ಕಬ್ಬಿಣದಂತಿದ್ದ ಮರದ ಬಾಗಿಲ ತಳ ಮೆಲ್ಲಮೆಲ್ಲಗೆ ಒದ್ದೆಯಾಗಿ, ಮಾಗಿ ಮೆದುವಾಗಿ ಗೆದ್ದಲುಗಳು ಬಂದರೆ ಏನು ಮಾಡುವುದೆಂದು ಕೀಗರೆಯುತ್ತಿತ್ತು. ಇವತ್ತಿನ ಮನೆಯ ಜನಕ್ಕೆ ಅದೊಂದು ಮುರುಕಲು ಬಾಗಿಲಂತೆ ಕಾಣುತ್ತಿತ್ತು. ಹುಟ್ಟಿ ಅಂಬೆಗಾಲಿಟ್ಟು ಬಂದ ಎಲ್ಲ ಮಕ್ಕಳೂ ಆ ಹೊಸಿಲನ್ನು ದಾಟಿದವರೇ... ಹಾಗೆ ಆ ಬಾಗಿಲ ಹೊಸಿಲಿಗೆ ನಮಸ್ಕರಿಸಿ ಒಳ ಬಂದವರೆಲ್ಲ ಈಗ ಕಾಲದ ಎಲ್ಲೆಲ್ಲಿಗೋ ಹೊರಟು ಹೋಗಿದ್ದಾರೆ. ಹಾಗೆಯೇ ಒಳಗಿಂದ ಹೊಸಿಲ ದಾಟಿ ಹೋದವರು ಏನೇನಾದರೊ... ಹೊರಗಿಂದ ಬಂದು ಸಾಂಸಾರಿಕ ಜಗತ್ತಿನ ಬಾಗಿಲ ಸಂಬಂಧವ ತೊರೆದು ಹೋದವರ ಅದೆಷ್ಟು ಕಥೆಗಳನ್ನು ಹೊಸಿಲು ಆಲಿಸಿದೆಯೊ ಏನೊ... ಹೊರ ಜಗತ್ತಿನ ಬಾಗಿಲು ಯಾವುದು, ಒಳಗಿನ ಏಕಾಂತ ಲೋಕದ ಬಾಗಿಲು ಯಾವುದು, ಅವೆರಡಕ್ಕೂ ಯಾವ ಮಹಾ ಮಾರ್ಗವಿದೆ ಎಂದು ಸಾಧುಸಂತರು ಚಿಂತಿಸುವಾಗ, ಆಗ ಆ ಮನೆಯಲ್ಲಿದ್ದ ಹಳೆ ಕಾಲದ ಹೆಂಗಸರು ಒಳಗೊಳಗೇ ತಮಗೆ 'ಒಳಗೂ ಬಾಗಿಲಿಲ್ಲ, ಹೊರಗೂ ಹೊಸ್ತಿಲಿಲ್ಲ ಅಲ್ಲವೇ' ಎಂದು ತಣ್ಣಗೆ ಉರಿಯುತ್ತಿದ್ದ ದೀಪಗಳತ್ತ ನೋಡುತ್ತಿದ್ದರು.

* * *

ಕಾಲದ ಅಲೆಯಲ್ಲಿ ಹಿಂದೆ ಸರಿಯುತ್ತಿದ್ದ ಮನೆಯ ಶೀತಗೋಡೆಗಳು ಮಳೆಗಾಲದಲ್ಲಿ ಅಲ್ಲಲ್ಲಿ ಕುಸಿದು ಹೋಗಿ ಮರುಕು ಗೋಡೆಗಳು ಅಲ್ಲಲ್ಲಿ ತಗಡನ್ನೋ, ಪ್ಲಾಸ್ಟಿಕ್ ಹಾಳೆಗಳನ್ನೋ